ಓ ಎಸ್ ನಂಃ 138-17
ಡಿ ಡಬ್ಲ್ಯೂ ಃ 1

ದಿಃ 18-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದ

16. ನಾನು ಎಂ ಎ, ಬಿ ಎಡ್ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯ ಗೊತ್ತಿದೆ ಅದನ್ನು ಓದಿಕೊಂಡು ಸಹಿ ಮಾಡಿರುತ್ತೇನೆ. ನನ್ನ ತಂದೆ ಹೆಸರು ಕೆ ಟಿ ರಾಧಾಕೃಷ್ಣ ಗೌಡ ಆಗಿರುತ್ತದೆ. ನನ್ನ ತಂದೆ ತಂದೆ ಹೆಸರು ಟಿ.ತಿಮ್ಮರಾಯಪ್ಪ ಆಗಿರುತ್ತದೆ. ತಿಮ್ಮರಾಯಪ್ಪ ಅವರಿಗೆ ನಾಲ್ಕು ಜನ ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಪುಟ್ಟತಿಮ್ಮರಾಯ ಗೌಡರು, ಕೆ ಟಿ ರಾಧಾಕೃಷ್ಣ ಗೌಡ, ಕೆ ಟಿ ವಿಜಯ್ ಕುಮಾರ್ ಮತ್ತು ಟಿ.ವಿಶ್ವನಾಥ್ ಆಗಿರುತ್ತಾರೆ. 3 ನೇ ಮಗನಾದ ಕೆ.ಟಿ ವಿಜಯ್ ಕುಮಾರ್ ಅವರು ಈ ದಾವೆಯ ವಾದಿ ಎಂದರೆ ನಿಜ.

17. ವಾದಿ ಹಾಜರುಪಡಿಸಿದ ವಾದ ಪತ್ರ ಮತ್ತು ಅವರು ಹಾಜರುಪಡಿಸಿದ ದಾಖಲೆಗಳು ಮತ್ತು ನೋಟೀಸ್ ನನಗೆ ತಲುಪಿರುತ್ತದೆ ಎಂದರೆ ಎಲ್ಲಾ ದಾಖಲೆಗಳು ತಲುಪಿಲ್ಲ ಎಂದು ಹೇಳುತ್ತಾರೆ. ನನಗೆ ವಾದ ಪತ್ರ, ಮಧ್ಯಂತರ ಅರ್ಜಿಗಳು ತಲುಪಿರುತ್ತವೆ ಅಂದರೆ ನಾನು ಮನೆಯ ವಿಳಾಸವನ್ನು ಬದಲಿಸಿದ್ದು, ಕೆಲವೊಂದು ತಲುಪಿಲ್ಲ ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ವಾದಿ ಸಹಿ ಮಾಡಿ ಹಾಜರುಪಡಿಸಿದ ವಾದ ಪತ್ರವನ್ನು ನಾನು ಖುದ್ದು ಪರಿಶೀಲನೆ ಮಾಡಿರುತ್ತೇನೆ. ನನ್ನ ಅಜ್ಜ ಟಿ ತಿಮ್ಮರಾಯಪ್ಪ ಅವರು ಜೀವಂತ ಇಲ್ಲ. ಟಿ ತಿಮ್ಮರಾಯಪ್ಪ ಅವರ ಹೆಂಡತಿ ಹೆಸರು ನಂಜಮ್ಮ ಎಂದು ಅವರೂ ಸಹ ಜೀವಂತ ಇರುವುದಿಲ್ಲ. ಟಿ ತಿಮ್ಮರಾಯಪ್ಪ ಅವರ ಮಕ್ಕಳಲ್ಲಿ ಕೆ ಟಿ ವಿಜಯ್ ಕುಮಾರ್ ಮತ್ತು ಟಿ.ವಿಶ್ವನಾಥ್ ಅವರು ಜೀವಂತ ಇದ್ದು ಉಳಿದವರು ತೀರಿಕೊಂಡಿರುತ್ತಾರೆ.

18. ಟಿ ತಿಮ್ಮರಾಯಪ್ಪ ಅವರಿಗೆ ಎಷ್ಟು ಆಸ್ತಿಗಳು ಇದ್ದವು ಗೊತ್ತಿದೆಯಾ ಅಂದರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ ಆದರೆ ನಾನು ಖರೀದಿ ಮಾಡಿದ ಆಸ್ತಿ ಟಿ ತಿಮ್ಮರಾಯಪ್ಪ ಅವರಿಗೆ ಸೇರಿತ್ತು ಎಂದು ಹೇಳುತ್ತಾರೆ. ನಾನು ಆಸ್ತಿಯನ್ನು ನನ್ನ ದೊಡ್ಡಮ್ಮ ಸರೋಜಮ್ಮ ಅವರಿಂದ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಜಮೀನಿನ ಸರ್ವೆ ನಂಬರ್ 62/1 ಆಗಿರುತ್ತದೆ. ಸ.ನಂ.62/1 ರ ಪೂರ್ತಿ ವಿಸ್ತೀರ್ಣ 37 ಎಕರೆ 2 ಗುಂಟೆ ಇರುತ್ತದೆ. ಈ ಜಮೀನಿನಲ್ಲಿ ಟಿ ತಿಮ್ಮರಾಯಪ್ಪ ಅವರಿಗೆ ಎಷ್ಟು ಜಮೀನು ಇತ್ತು ಗೊತ್ತಿಲ್ಲ. ಈ ಬಗ್ಗೆ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ಸ.ನಂ.62/1 ರಲ್ಲಿ ಟಿ ತಿಮ್ಮರಾಯಪ್ಪ ಅವರಿಗೆ ಎಷ್ಟು ಜಮೀನು ಇತ್ತು ಎಂಬುದರ ಬಗ್ಗೆ ನಾನು ಖುದ್ದು ಪರಿಶೀಲನೆ ಮಾಡಿಲ್ಲ.

ನಾನು ಸರೋಜಮ್ಮ ಅವರ ಕಡೆಯಿಂದ ಸ .ನಂ.62/1 ರಲ್ಲಿ ಒಂದು ಕಡೆ 4 ಎಕರೆ ಮತ್ತು ಇನ್ನೊಂದು ಕಡೆ 1 ಎಕರೆ ಜಮೀನನ್ನು ಒಟ್ಟು 5 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ.

19. 4 ಎಕರೆ ಮತ್ತು 1 ಎಕರೆ ಜಮೀನುಗಳ ಅಂತರ ಅರ್ಧ ಕಿ.ಮೀ ಗಿಂತ ಕಡಿಮೆ ಇರುತ್ತದೆ. ನನ್ನ ದೊಡ್ಡಮ್ಮ ಅವರಿಗೆ ಆಸ್ತಿ ನನ್ನ ಅಜ್ಜಿ ಮತ್ತು ತಾತನಿಂದ ವಿಭಾಗ ರೂಪದಲ್ಲಿ ಬಂದಿರುತ್ತದೆ. ನನ್ನ ದೊಡ್ಡಮ್ಮ ಅವರಿಗೆ ವಿಭಾಗದಲ್ಲಿ ಬಂದ ಜಮೀನಿನ ಬಗ್ಗೆ ನಾನು ವಿಭಾಗ ಪತ್ರವನ್ನು ಓದಿಲ್ಲ. ನನ್ನ ದೊಡ್ಡಮ್ಮ ಅವರಿಗೆ ಆದ ವಿಭಾಗ ಪತ್ರವನ್ನು ನಾನು ಓದಿರುತ್ತೇನೆ. ನನ್ನ ದೊಡ್ಡಮ್ಮ ಅವರಿಗೆ ವಿಭಾಗ ಪತ್ರ 1970 ರಲ್ಲಿ ಆಗಿರುತ್ತದೆ. ನನ್ನ ದೊಡ್ಡಮ್ಮ ಅವರಿಗೆ ವಿಭಾಗದಲ್ಲಿ ಜಮೀನು ನನ್ನ ದೊಡ್ಡಪ್ಪನ ಭಾಗದ ಜಮೀನು ಬಂದಿರುತ್ತದೆ. ಸದರಿ ವಿಭಾಗ ಪತ್ರ ಆಗುವಾಗ ನನ್ನ ದೊಡ್ಡಪ್ಪ ಜೀವಂತ ಇದ್ದರು. ವಿಭಾಗದಲ್ಲಿ ನನ್ನ ಅಜ್ಜಿ ನಂಜಮ್ಮ ಅವರಿಗೆ 5 ಎಕರೆ ಜಮೀನು ಭಾಗಕ್ಕೆ ಹೋಗಿರುತ್ತದೆ. ವಿಭಾಗದಲ್ಲಿ ಸರೋಜಮ್ಮ ಅವರಿಗೆ 5 ಎಕರೆ ಜಮೀನು ಬಂದಿರುತ್ತದೆ, ವಾದಿಗೆ ವಿಭಾಗದಲ್ಲಿ ಎಷ್ಟು ಎಕರೆ ಜಮೀನು ಬಂದಿರುತ್ತದೆ ಗೊತ್ತಿಲ್ಲ, ನನ್ನ ತಂದೆಗೆ ವಿಭಾಗದಲ್ಲಿ ಎಷ್ಟು ಎಕರೆ ಜಮೀನು ಬಂದಿರುತ್ತದೆ ಗೊತ್ತಿಲ್ಲ, ವಿಶ್ವನಾಥ ಅವರಿಗೆ ವಿಭಾಗದಲ್ಲಿ ಎಷ್ಟು ಎಕರೆ ಜಮೀನು ಬಂದಿರುತ್ತದೆ ಗೊತ್ತಿಲ್ಲ.

20. ವಿಭಾಗ ಆದ ನಂತರ, ವಿಭಾಗದ ಆಸ್ತಿಗಳ ಬಗ್ಗೆ ಕೆಲವು ನೋಂದಾಯಿತ ವ್ಯವಹಾರಗಳು ಆಗಿರುತ್ತವೆ ಎಂದರೆ ನಿಜ. ಸದರಿ ವ್ಯವಹಾರಗಳಲ್ಲಿ ವಾದಿ ತಮ್ಮ ಭಾಗದ ಆಸ್ತಿಯನ್ನು ಅವರ ತಾಯಿಗೆ ಬಿಟ್ಟು ತಮ್ಮ ತಾಯಿಯ ಆಸ್ತಿಯನ್ನು ತಾವು ತೆಗೆದುಕೊಂಡಿದ್ದರು ಅಂದರೆ ನಿಜ. ಈ ವ್ಯವಹಾರ ನೋಂದಾಯಿತ ಪತ್ರದ ಮೂಲಕ ಆಗಿರುತ್ತದೆ ಅಂದರೆ ನಿಜ. ವಾದಿಗೆ ಭಾಗದಲ್ಲಿ ಬಂದ 6 ಎಕರೆ 10 ಗುಂಟೆ ಜಮೀನನ್ನು ತಮ್ಮ ತಾಯಿಗೆ ಬಿಟ್ಟು ತಮ್ಮ ತಾಯಿಗೆ ಬಂದಿದ್ದ 5 ಎಕರೆ ಜಮೀನನ್ನು ತಾವು ನೋಂದಾಯಿತ ಪತ್ರದ ಮೂಲಕ ತೆಗೆದುಕೊಂಡಿದ್ದರು ಅಂದರೆ ನಿಜ.

21. ನಿಡಿ 1 ರಲ್ಲಿ ನನ್ನ ದೊಡ್ಡಮ್ಮ ಸರೋಜಮ್ಮ ಅವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ಒಕ್ಕಣೆ ಇಲ್ಲ ಅಂದರೆ ಸದರಿ ವಿಷಯ ಕ್ರಯಪತ್ರದಲ್ಲಿರಬೇಕಾಗುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನಿಡಿ 1 ರಲ್ಲಿ 4 ಎಕರೆ ಆಸ್ತಿಯ ದಕ್ಷಿಣಕ್ಕೆ ವಾದಿಯ ಆಸ್ತಿ ಎಂಬುದಾಗಿ ನಮೂದು ಇದೆ ಅಂದರೆ ನಿಜ. ನಿಡಿ 1 ರ 4 ಎಕರೆ ಜಮೀನಿನ ಚೆಕ್ಕುಬಂಧಿಯಲ್ಲಿ 1 ಎಕರೆ ಜಮೀನು ಬರುವುದಿಲ್ಲ ಅಂದರೆ ನಿಜ. 2004 ರಲ್ಲಿ ಆಸ್ತಿಯ ಕ್ರಯಪತ್ರ ನನ್ನ ಕಡೆ ಇತ್ತು ಅಂದರೆ ನಿಜ. ನಿಡಿ 2 ರ ಪ್ರಕಾರ 1996-1997 ರ ಮ್ಯುಟೇಷನ್ ಆದೇಶದಂತೆ ವಾದಿ ಹೆಸರಿಗೆ ಸ.ನಂ.62/1 ರಲ್ಲಿ 5 ಎಕರೆ ಜಮೀನು ಇರುತ್ತದೆ ಅಂದರೆ ನಿಜ. ಈ ರೀತಿಯಾಗಿ ಎಲ್ಲಾ ಪಹಣಿಗಳು ಇರುತ್ತವೆ ಅಂದರೆ ನಿಜ. ಈ ರೀತಿಯಾಗಿ ನಂಜಮ್ಮ ಅವರಿಂದ ವಾದಿಗೆ ಅದಲು ಬದಲು ಮೂಲಕ ಜಮೀನು ಬಂದಿರುತ್ತದೆ ಅಂದರೆ ನಿಜ.

22. ನಾನು 5 ಎಕರೆ ಜಮೀನನ್ನು ಖರೀದಿ ಮಾಡಿದ ನಂತರ ಅದನ್ನು ಖಾಸಗಿ ಸರ್ವೇಯರ್ ರವರ ಮೂಲಕ ಸರ್ವೆ ಮಾಡಿಸಿರುತ್ತೇನೆ. ನಾನು ಖರೀದಿ ಮಾಡಿದ ಆಸ್ತಿಯ ಪೋಡಿ ಆಗಿರುವುದಿಲ್ಲ. ವಾದಿಯ ಜಮೀನು ಪೋಡಿ ಆಗಿತ್ತು ಆದರೆ ಈಗ ಅದು ರದ್ದು ಆಗಿರುತ್ತದೆ. ವಾದಿಯ ಜಮೀನು ಪೋಡಿ ಆದಾಗ ಅದಕ್ಕೆ ಸ.ನಂ.62/5 ಎಂದು ನಂಬರ್ ಕೊಟ್ಟಿದ್ದರು. ವಾದಿಯ ಜಮೀನಲ್ಲಿ ಪೋಡಿ ಮಾಡಲು ಅರ್ಜಿಯನ್ನು ವಾದಿ ಸಲ್ಲಿಸಿದ್ದರು. ವಾದಿ ತಮ್ಮ ಜಮೀನನ್ನು ಪೋಡಿ ಮಾಡುವ ಕಾಲಕ್ಕೆ ನನಗೆ ನೋಟೀಸ್ ತಲುಪಿದ್ದು ಆದರೆ ನನಗೆ ಬರಲು ಆಗಿರಲಿಲ್ಲ. ಪೋಡಿ ಆಗುವ ಕಾಲಕ್ಕೆ ಸ.ನಂ.62/1 ರ 37 ಎಕರೆ 2 ಗುಂಟೆ ಜಮೀನಿನ ಎಲ್ಲಾ ಮಾಲೀಕರಿಗೂ ನೋಟೀಸ್ ತಲುಪಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

23. ವಾದಿ ಈ ಮೊದಲು ಸರ್ವೆ ಸರಿಯಾಗಿ ಆಗಿಲ್ಲ ಎಂದು ರಾಮನಗರದ ಎಡಿಎಲ್ಆರ್ ಕಚೇರಿಯಲ್ಲಿ ಒಂದು ಮೊಕದ್ದಮೆಯನ್ನು ದಾಖಲು ಮಾಡಿದ್ದರು. ಸದರಿ ಮೊಕದ್ದಮೆಯಲ್ಲಿ ನನಗೆ ವಕೀಲರನ್ನು ನೇಮಿಸಿಕೊಂಡು ತಕರಾರು ಸಲ್ಲಿಸಲು ತೊಂದರೆ ಇರಲಿಲ್ಲ ಅಂದರೆ ಆಗ ನನಗೆ ಸರಿಯಾದ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ನನಗೆ ಸದರಿ ಮೊಕದ್ದಮೆಯ ನೋಟೀಸ್ ತಲುಪಿರಲಿಲ್ಲ. ನನಗೆ ಸರಿಯಾದ ಮಾಹಿತಿ ಇರಲಿಲ್ಲ ಎಂದು ನಾನು ಹೇಳಿದ್ದು, ಸರಿಯಾದ ಮಾಹಿತಿ ಏನೂ ಇರಲಿಲ್ಲ ಅಂದರೆ ನನಗೆ ಪೋಡಿ ಆದ ವಿಚಾರ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

24. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯವನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ನನಗೆ ಆಸ್ತಿಯ ಬಗ್ಗೆ ಪೂರ್ಣ ಮಾಹಿತಿ ಇದೆ. ದಾವಾ ಆಸ್ತಿಯ ಚೆಕ್ಕುಬಂಧಿ ವಾದಿಗೆ ಸಂಬಂಧಿಸಿದ ಆಸ್ತಿಯ ಚೆಕ್ಕುಬಂಧಿ ಎಂಬುದು ಗೊತ್ತಿದೆ. ದಾವಾ ಆಸ್ತಿ ವಾದಿಗೆ ನಂಜಮ್ಮ ಅವರಿಂದ ಬಂದಂತಹ ಆಸ್ತಿ ಅಂದರೆ 5 ಎಕರೆ ಜಮೀನು ವಾದಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**